ಬಡಾವಣೆಯ ಮ್ಯಾಪಿನಲ್ಲಿ ಗುರುತಿಸಿರುವ ಎಲ್ಲಾ ಜಾಗಗಳಿಗೆ ಇನ್ನೂ ಒಂದು ತಿಂಗಳೊಳಗೆ ಇದು ಪಾರ್ಕ್ ಇದು ಆಟದ ಮೈದಾನ ಎಂದು ನಾಮಫಲಕಗಳನ್ನು ಹಾಕುವುದಕ್ಕೆ ನಾನು ಸೂಚನೆಯನ್ನು ನೀಡಿದ್ದೇನೆ.

ಅಧ್ಯಕ್ಷರು :— ಮಾನ್ಯ ಸದಸ್ಯರಾದ ವೀರಪ್ಪಮೊಯಿಲಿಯವರು ಕೇಳಿದ ಪ್ರಶ್ನೆಯ ನಿಗೂಢ ಅರ್ಥವನ್ನು ತಾವು ಗ್ರಹಿಸಲಿಲ್ಲ. ಅವರು ಹೇಳತಕ್ಕದ್ದು ರಾತ್ರೋರಾತ್ರಿ ಒಂದು ಪಾರ್ಕಿನಲ್ಲಿ ಒಂದು ದೇವಾಲಯ ಕಟ್ಟುವುದು, ಮಸೀದಿ ಕಟ್ಟುವುದು ಅಥವ ಇನ್ನಾವುದೋ ಮಾಡುವುದು, ರಸ್ತೆಗೆ ಅಡ್ಡಲಾಗಿ ಕಟ್ಟುವುದು ಅಲ್ಲಿಯ ಜನರ ಭಾವನೆಯನ್ನು ಕೆರಳಿಸುವುದು, ಯಾವ ಉದ್ದೇಶಕ್ಕೆ ಆ ಜಾಗ ಇರುತ್ತದೊ ಅದಕ್ಕೆ ಬಳಸದಂತೆ ಮಾಡುತ್ತಾರೆ. ಸ್ಥಳೀಯವಾಗಿ ಕಾನೂನು ಸಮಸ್ಯೆಯನ್ನು ತಂದೊಡ್ಡುತ್ತಾರೆ. ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗುತ್ತದೆ. ಅದನ್ನು ತಡೆಗಟ್ಟುವುದಕ್ಕೆ ನೀವು ಏನಾದರೂ ಆಲೋಚನೆ ಮಾಡುತ್ತೀರಾ ಎಂದು ಅವರು ಕೇಳಿರುವುದು.

ಶ್ರೀ ವಿ. ಸೋಮಣ್ಣ :— ಅದಕ್ಕೋಸ್ಕರ ನಾವು ನಾಮಫಲಕಗಳನ್ನು ಹಾಕುತ್ತೇವೆ. ರೀತಿಯಾಗಿ ಪಾರ್ಕ್‌ಗಳಲ್ಲಿ ಆಟದ ಮೈದಾನಕ್ಕೆಂದು ಇರತಕ್ಕ ಜಾಗದಲ್ಲಿ ಏನು ಮಾಡಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ.

ಅಧ್ಯಕ್ಷರು :— ಮಂತ್ರಿಗಳು ಒಂದು ಕೆಲಸ ಮಾಡಿ. ಅನಂತರ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಮಾನ್ಯ ಸದಸ್ಯರ ಪ್ರಶ್ನೆಯನ್ನು ಅವರು ಅರ್ಥಮಾಡಿಕೊಂಡಿದ್ದಾರೆ. I have understood your question. I will request him to come up with a proper reply at the right time.

ಬೆಂಗಳೂರು ನಗರದ ಬೆಳವಣಿಗೆಯನ್ನು ತಡೆಯಲು ಕ್ರಮ ಕೈಗೊಳ್ಳುವುದು.

2 (136) ಶ್ರೀ ವಾಟಾಳ್ ನಾಗರಾಜ್, (ಚಾಮರಾಜನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಬೆಳವಣಿಗೆಯನ್ನು ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಬೆಂಗಳೂರು ನಗರದಲ್ಲಿರುವ ಜನಸಂಖ್ಯೆ ಎಷ್ಟು?

ಇ) ನಗರಕ್ಕೆ ದಿನಂಪ್ರತಿ ಬರುತ್ತಿರುವ ಜನರ ವಲಸೆಯನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :—

ಅ) ಬೆಂಗಳೂರು ನಗರದ ಬೆಳವಣಿಗೆಯನ್ನು ತಡೆಯಲು ಏಷ್ಯನ್ ಡೆವಲಪ್ ಮೆಂಟ್ ಬ್ಯಾಂಕ್ ನೆರವಿನಿಂದ ತುಮಕೂರು, ರಾಮನಗರಂ, ಚನ್ನಪಟ್ಟಣ ಮತ್ತು ಮೈಸೂರು ನಗರಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಿ ಬೆಂಗಳೂರು ನಗರಕ್ಕೆ ಪರ್ಯಾಯ ನಗರಗಳನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.

ಆ) 39.46 ಲಕ್ಷ (1991ರ ಜನಗಣತಿಯಂತೆ)

ಇ) ಬಹುಪಾಲು ಉದ್ಯೋಗವನ್ನರಿಸಿ ಬೆಂಗಳೂರಿಗೆ ವಲಸೆ ಬರುತ್ತಿರುವುದರಿಂದ ಉದ್ಯೋಗವನ್ನು ಸೃಷ್ಟಿಸಿ ಕಲ್ಪಿಸುವ ಉದ್ದಿಮೆಗಳನ್ನು ಬೆಂಗಳೂರಿನಿಂದ ದೂರ ಇರುವ ಪ್ರದೇಶಗಳನ್ನು 'ಬೆಳವಣಿಗೆ ಕೇಂದ್ರ' ಗಳನ್ನಾಗಿ ಸ್ಥಾಪಿಸಲು ಉದ್ದಿಮೆದಾರರ ಮನವೊಲಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, 1991ರ ಜನಗಣತಿಯ ಪ್ರಕಾರ ಬೆಂಗಳೂರು ನಗರದ ಜನಸಂಖ್ಯೆ 39 ಲಕ್ಷ ಎಂದು ಇದೆ. 1999ರ ಜನಗಣತಿಯ ಪ್ರಕಾರ 50ಲಕ್ಷ ಜನಸಂಖ್ಯೆ ಆಗಿರುತ್ತದೆಂದು ನನಗನಿಸುತ್ತದೆ. 50ಲಕ್ಷ ಜನ ಇವರು ಯಾರು? ನೂರಕ್ಕೆ ನೂರರಷ್ಟು ಕನ್ನಡಿಗರು ಇದ್ದಾರೆಯೆ? ಹೊರಗಡೆಯಿಂದ ತಮಿಳರು ಮಲೆಯಾಳಿಗಳು, ಗುಜರಾತಿಗಳು, ಮಾರ್ವಾಡಿಗಳು, ಸಿಂಧಿಗಳು ಬೆಂಗಳೂರು ನಗರಕ್ಕೆ ಪ್ರತಿದಿನ ಬರುತ್ತಾರೆ. ಕನ್ನಡಿಗರ ಸಂಖ್ಯೆ ಜಾಸ್ತಿಯಾಗುತ್ತಿಲ್ಲ. ಪರಭಾಷೆಯವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಬೇರೆಯವರ ಸಂಖ್ಯೆ ಈ ಊರಿನಲ್ಲಿ ಜಾಸ್ತಿಯಾಗುತ್ತಿದೆ. ಹೊರಗಡೆಯಿಂದ ಬರತಕ್ಕವರ ಸಂಖ್ಯೆಯನ್ನು ಮಮಸ್ಥಿತವಾಗಿ ತಡೆಗಟ್ಟುವುದಕ್ಕೆ ಸರ್ಕಾರದವರು ಏನಾದರೂ ಪ್ರಾಮಾಣಿಕ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆಯೆ? ಇವತ್ತು ನೇರವಾಗಿ ಮಾತನಾಡುವುದಾದರೆ, ಇವತ್ತು ಹೊರಗಡೆಯಿಂದ ಯಾರ್ಯಾರು ಬರುತ್ತಿದ್ದಾರೆ ಅವರಿಂದ ಅನಾಹುತಗಳು ಆಗುತ್ತಿವೆ, ಅನೇಕ ತೊಂದರೆಗಳಾಗುತ್ತಿವೆ, ಅತ್ಯಾಚಾರ, ಅನಾಚಾರ, ದರೋಡೆ, ಲೂಟಿ ಎಲ್ಲವೂ ನಡೆಯುತ್ತಿವೆ. ಇವತ್ತು ಬೆಂಗಳೂರು ನಗರವಾಗಿ ಉಳಿದಿದೆಯೆ? ಪ್ರಾಮಾಣಿಕವಾಗಿ ವಲಸೆಯನ್ನು ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ?

ಅಧ್ಯಕ್ಷರು :— ಒಂದು ನಿಮಿಷ ಇರಿ. I would request the Hon'ble Chief Minister to reply to this question. Constitutional Problems are involved as to how to prevent others from coming to Karnataka.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ಮತ್ತು ಅವರು ಕೇಳತಕ್ಕ ಪ್ರಶ್ನೆಯ ಹಿಂದೆ ಇರತಕ್ಕ ಭಾವನೆ ಸರಿಯಾದುದು. ಆದರೆ ರಾಜ್ಯಾಂಗಬದ್ಧವಾಗಿ ನಾವು ಕನ್ನಡಿಗರಲ್ಲದವರನ್ನು ಬೆಂಗಳೂರಿಗೆ ಬರಬಾರದೆಂದು ಹೇಳುವುದಕ್ಕಾಗುವುದಿಲ್ಲ. ಬರುತ್ತಾರೆ, ವ್ಯಾಪಾರಕ್ಕೋಸ್ಕರ, ಕಾರ್ಖಾನೆ ತೆರೆಯುವುದಕ್ಕೋಸ್ಕರ, ವೈದ್ಯಕೀಯ ಕ್ಲಿನಿಕ್ಸ್ ಓಪನ್ ಮಾಡುವುದಕ್ಕೆ ಬರುತ್ತಾರೆ. ಇನ್ನು ಹಲವಾರು ಕಾರಣಗಳಿಗಾಗಿ ಬರುತ್ತಾರೆ. ಕನ್ನಡಿಗರ ಹಿತರಕ್ಷಣೆ ಮಾಡಬೇಕೆಂದು ಹೇಳುವುದು ಅದು ಬೇರೆ. ಈಗ ನಾವು ಬೆಳಗಾಂ ಬಾರ್ಡರ್‌ನಲ್ಲಿ ಹಿಂದೆ ಎಲ್ಲೆಲ್ಲಿ ಸರ್‌ಪ್ಲಸ್ ಲ್ಯಾಂಡ್ ಇತ್ತು ಮತ್ತು ಹಳೆಯ ಮೈಸೂರಿನ ಕೆಲವು ಯೋಜನೆಗಳಲ್ಲಿ ಬೇರೆ ಕಡೆ ಹೇಗೆ ಭೂಮಿ ಕೊಟ್ಟಿದ್ದೇವೆ. ಹಾಗೆ ಅಲ್ಲಿ ಕೊಟ್ಟಿದ್ದರೆ ಸರಿಯಾಗುತ್ತಿತ್ತು. ಲಾಂಗ್ ರೇಂಜ್ ಮಾಡಬೇಕಾಗಿತ್ತು. ಪ್ಲಾನಿಂಗ್ ಈಗ ಕನ್ನಡಿಗರನ್ನು ಹಿತರಕ್ಷಣೆ ಮಾಡತಕ್ಕದ್ದು ಬೆಂಗಳೂರಿನಲ್ಲಿ ಬಹಳ ಕಷ್ಟಸಾಧ್ಯವಾದ ಕೆಲಸ. ಇದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಈಗ ನಾವು ಶಿವಸೇನೆಯವರ ಹಾಗೆ ಮಾಡುವುದಕ್ಕಾಗುವುದಿಲ್ಲ. ಅವರ ರೀತಿ ದಕ್ಷಿಣದವರೆಲ್ಲಾ ಹೊರಟುಹೋಗಿಯೆಂದು ಆ ರೀತಿಯ ಅಸಭ್ಯ ವರ್ತನೆ ಮಾಡುವುದಕ್ಕಾಗುವುದಿಲ್ಲ. ನಮ್ಮ ಮೇಲೆ ಆಗತಕ್ಕ ಅಪ್ರತ್ಯಕ್ಷ ಧಾಳಿ ಏನಿದೆ, ಅದನ್ನು ಹೇಗೆ ತಡೆಯಬೇಕು ಏನ್ನುವುದರ ಬಗ್ಗೆ ನಾವೆಲ್ಲರೂ ಸೇರಿ ಆಲೋಚನೆ ಮಾಡೋಣ.

It is not such simple question. ಅದಕ್ಕೆ ಅವರ ಕಳಕಳಿಯನ್ನು ಒಪ್ಪುತ್ತೇನೆ. ಈ ಬಗ್ಗೆ ಬೇರೆ ನಾವೆಲ್ಲರೂ ಸೇರಿ ಯೋಚನೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :— ಮೊನ್ನೆತಾನೇ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಕನ್ನಡಿಗರ ಬಗ್ಗೆ ಮಾತನಾಡಿದ್ದಾರೆ. ಕನ್ನಡಿಗರು ಆಲದಮರ. ಆ ಆಲದಮರಕ್ಕೆ ಗುಟ್ಟಿ ಹೊಡೆಯುವುದಕ್ಕೆ ಬೇರೆ ಬೇರೆ ಭಾಷೆಯವರು ಇಲ್ಲಿ ಬಂದಿದ್ದಾರೆನ್ನುವ ಮಾತನ್ನು ಕನಕಪುರ ಸಾಹಿತ್ಯ ಸಮ್ಮೇಳನದಲ್ಲಿ ಹೇಳಿರುವುದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ನಿಮ್ಮ ಭಾಷಣ ಎಷ್ಟರಮಟ್ಟಿಗೆ ಇತ್ತೆಂದು ನಾನು ಕೇಳಲಿಲ್ಲ. ಬೆಂಗಳೂರು ನಗರದ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಅದರ ಬಗ್ಗೆ ಸಮಗ್ರ ಒಂದು ಸಮೀಕ್ಷೆಯಾಗಬೇಕು. ಕರ್ನಾಟಕ ರಾಜ್ಯಕ್ಕೆ ಎಷ್ಟು ಜನ ಅದರಲ್ಲೂ ಬೆಂಗಳೂರಿಗೆ ರಾಜಧಾನಿಗೆ ಬರುತ್ತಿದ್ದಾರೆ, 1991 ರಲ್ಲಿ 39 ಲಕ್ಷ ಇದ್ದರೆ 1999 ರಲ್ಲಿ 50 ಲಕ್ಷ ಬರುತ್ತಾರೆ. ಇಲ್ಲಿ ಕನ್ನಡಿಗರು ಅಲ್ಪಸಂಖ್ಯಾತರು ಆಗುತ್ತಿದ್ದಾರೆ. ಬೇರೆ ಭಾಷೆಯವರಿಗೆ ಉದ್ಯೋಗ ಕೊಡುತ್ತಿದ್ದಾರೆ. ಅವರಿಗೆ ಉದ್ಯೋಗ ಕೊಡುವುದು ಸರಿಯಲ್ಲವೆಂದರೆ ಬೇರೆ ರಾಜ್ಯದ ಮುಖ್ಯಮಂತ್ರಿಗಳು ನಮ್ಮ ಮೇಲೆ ಧಾಳಿ ಮಾಡುತ್ತಾರೆ. ಹಾಗಾದರೆ ಇದೇನು ತೋಟದಪ್ಪನ ಛತ್ರನಾ ಇದು? ನಿಜ, ಸಂವಿಧಾನದ ಪ್ರಕಾರ ಯಾರು ಎಲ್ಲಿಬೇಕಾದರೂ ಬದುಕಬಹುದು. ಈ ರೀತಿ ಬೇರೆ ರಾಜ್ಯಗಳಲ್ಲಿ ಇಲ್ಲ. ಇದು

ಕರ್ನಾಟಕದ ಬೆಂಗಳೂರು ನಗರದಲ್ಲಿರತಕ್ಕದ್ದು. ಇಲ್ಲಿನ ಮಣ್ಣಿನ ಮಕ್ಕಳಿಗೆ ಉದ್ಯೋಗವಿಲ್ಲ, ಕನ್ನಡಿಗರಿಗೆ ಉದ್ಯೋಗವಿಲ್ಲ. ಸರ್ವಭಾಷೆಯವರು ನಗರದಲ್ಲಿದ್ದಾರೆ. ಇದರ ಬಗ್ಗೆ ನೀವು ಪ್ರಾಮಾಣಿಕ ಚಿಂತನೆ ಏನು ಮಾಡುತ್ತೀರಿ ಎಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೆ, ಅನ್ಯಭಾಷೆಯವರು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಬೆಂಗಳೂರು ನಗರದಲ್ಲಿ ಬದುಕುತ್ತಿದ್ದಾರೆಂಬುದು ಹೆಮ್ಮೆಪಡುವಂತಹ ಸಂಗತಿ. ಬೇಕಾದ ಇತರೆ ಸವಲತ್ತುಗಳನ್ನು ಕೊಡೋಣ. ಪ್ರಮುಖವಾಗಿ ಇಲ್ಲಿರತಕ್ಕ ಕನ್ನಡಿಗರು ಅದು ಉದ್ಯೋಗದಲ್ಲಿರಬಹುದು ಬೇರೆ ಯಾವುದೇ ಇರಬಹುದು ಅವರಿಗೆ ಯಾವುದೇ ಆದ್ಯತೆ ಸಿಗದೆ ಅವಕಾಶಗಳು ಸಿಗದೆ ಬೀದಿ ಪಾಲಾಗುತ್ತಿದ್ದಾರೆ. ಸರ್ಕಾರ ಸಮಗ್ರವಾಗಿ ಯೋಚನೆ ಮಾಡಿ ಕನ್ನಡಿಗರು ನೆಮ್ಮದಿಯಿಂದ ಬದುಕುವುದಕ್ಕೆ ಏನಾದರೂ ಕಾರ್ಯಕ್ರಮ ರೂಪಿಸುತ್ತದೆಯೇ ಆ ಚಿಂತನೆಯಲ್ಲಿ ಸರ್ಕಾರ ಇದೆಯೇ?

ಶ್ರೀ ಜೆ.ಹೆಚ್. ಪಟೇಲ್ :— ಅದರ ಬಗ್ಗೆ ಚರ್ಚೆ ಮಾಡೋಣ. ಅವರ ಅಭಿಪ್ರಾಯ ನನಗೆ ಸಹಮತಿ ಇದೆ. ಹೇಗೆ ಬಗೆಹರಿಸಬೇಕು ಅದು ಅಷ್ಟು ಸುಲಭವಲ್ಲ. ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ಬೆಂಗಳೂರು ಕನ್ನಡಿಗರಿಗಾಗಿ ಉಳಿದಿಲ್ಲ. ಆ ಪರಿಸ್ಥಿತಿಯನ್ನು ದಾಟುತ್ತಿದ್ದೇವೆ. ನಾವು ವೇದಿಕೆಯ ಮೇಲೆ ಹೊರಗಡೆ ಭಾಷಣ ಮಾಡುತ್ತೇವೆ. ಕನ್ನಡಿಗರನ್ನು ಉದ್ಧಾರ ಮಾಡಬೇಕೆಂದು ಹೇಳುತ್ತೇವೆ. ಆದರೆ ಇದರ ಬಗ್ಗೆ ಪ್ರಮಾಣಿಕವಾದ ಚಿಂತನೆಯಿಲ್ಲ. ನಿಮಗೆ ಈ ಬಗ್ಗೆ ಕಳಕಳಿಯಿಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಇದು ಕಣ್ಣೀರಿನ ಕತೆ. ಬೆಂಗಳೂರಿನ ಜನತೆಗೆ ಇದು ಕಣ್ಣೀರಿನ ಕತೆಯಾಗಿದೆ. ಸರ್ಕಾರ ಇದರಲ್ಲಿ ವಿಫಲವಾಗಿದೆ. ಅದಕ್ಕಾಗಿ ನಾನು ಸಭಾತ್ಯಾಗ ಮಾಡುತ್ತೇನೆ. ಬಹಳ ನೋವಿನಿಂದ ಹೋಗುತ್ತಿದ್ದೇನೆ. ಕನ್ನಡಿಗರನ್ನು ಉಳಿಸುವುದಕ್ಕೆ ಯಾವುದೇ ಪ್ರಯತ್ನ ಮಾಡುತ್ತಿಲ್ಲವೆಂದು ಬಹಳ ನೋವಿನಿಂದ ನಾನು ಸಭೆಯಿಂದ ಹೊರಗೆ ಹೋಗುತ್ತಿದ್ದೇನೆ. ತಾವು ಏನು ಬೇಕಾದರೂ ತಿಳಿದುಕೊಳ್ಳಿ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಜೆ.ಹೆಚ್. ಪಟೇಲ್ :— ಮಾನ್ಯ ಸದಸ್ಯರು ವಾಕ್‌ಔಟ್ ಮಾಡುವುದರಿಂದ ಕನ್ನಡಿಗರಿಗೆ ಒಳ್ಳೆಯದಾಗುವುದಾದರೇ ಆಗಲಿ.